‘ಅದೆಂಗ ನಿದ್ದೆ ಬಂದೀತು? ನಿನ್ನ ಬೆನ್ನಿಗಿರ್ತೀನಿ. ನೀನು ಬೆಟ್ಟದಂಗ! ನಿನ್ನ ಧ್ಯಾನವೇ ನಿದ್ದೆ. ನಿದ್ದೆಯೇ ಧ್ಯಾನ. ಆದ್ರ ತಾತ ಇಷ್ಟು ವರ್ಷದಾಗ ನಾನು ನಿನ್ನ ನೋಡ್ಕಂಡ ಬಂದೀನಿ. ಇಷ್ಟು ಮೈಗಚ್ಚಿಕೊಂಡು ಮಾಡ್ತಿದ್ದುದು ಇದೇ ಕಾರ್ಯಂತನಸ್ತದ. ಅಂದ್ರ ಎಷ್ಟು ದೊಡ್ಡದಿದ್ರೂ ಚೂರು ಚಿಂತೆಯಿಲ್ದಂಗ ಮಾಡಿ ಮುಗಸ್ತಿದ್ದಿ ಅಂತ...’

‘ನೀನಂಬದು ದಿಟದ ಮಾತೇ ಐತೆ. ದಮ್ಮು ಹತ್ತಿದ್ದು ನಿಜ. ಇನ್ನೂ ದಮ್ಮು ಆರಿಲ್ಲ’

‘ನೀನು ಹೇಳಿದ್ದಕ್ಕೇ ನಾನು ಒಪ್ಪಿ, ಮನೆಮಂದಿನ್ನ ಒಪ್ಪಿಸಿ ನಿಂತಿದ್ದೀನಿ’

ಶಿವಮಲ್ಲಯ್ಯ ಎದ್ದು ಶಿವಸಂಗಪ್ಪನ ಅಂಗೈಯಲ್ಲಿ ತನ್ನ ಅಂಗೈ ಸೇರಿಸಿ ‘ನಾನು ನಿನ್ನ ಋಣಿಯಾಗರ್ತೀನಿ, ಶಿವಸಂಗಪ್ಪ’ ಎಂದ ಮೈತುಂಬಿ.

‘ದೊಡ್ಡ ಮಾತು ನಿಂದು ಬುಡು! ನಮ್ಮ ಸುತ್ತಲೂರುಗಳೆಲ್ಲ ನಿನ್ನ ಋಣಿಯಾಗಿವೆ... ಜಾತಿ ಕುಲ ಕಸುಬು ನೋಡದೆನೇ ಮಂದಿಯನ್ನು ‘ಅಯ್ಯಾ’ ಅಂತ ಕರಿತಿದ್ದಿ ನೀನು! ನನ್ನ ಅದು ಸಾಧಿಸಿಲ್ಲ, ನಿನ್ನಿಂದ ಇದ್ದು!’ ಎಂದು ಕೂಡಿಸಿದ.

ಇಬ್ಬರೂ ತಣ್ಣಗೆ ಕುಂತರು! ಮನೆ ಒಳ-ಹೊರಗೆ ಮಂದಿಯ ಮಾತುಕತೆಗಳ ಗದ್ದಲವಿತ್ತು. ಬಂದು ಬಳಗ ಎರಡು ದಿನದಿಂದ ಬಂದು ಬಂದು ದೊಡ್ಡ ಮನೆ ಸೇರಿದ್ದರು. ಅವರೆಲ್ಲ ಮಾತುಕತೆಗಳಲ್ಲೇ ಮುಳುಗಿ ಹೋಗಿದ್ದರು. ಹೊರಗೆ ಊರುಕೇರಿ ಮಂದಿ ಕೆಲಸಕಾರ್ಯಗಳನ್ನು ಮಾಡುತ್ತ ಸಡಗರದಲ್ಲಿದ್ದರು. ಬಸವಣ್ಣನ ಪೂಜೆ ಮುಗಿದು, ಪ್ರಸಾದ ಪಡೆದ ಮ್ಯಾಲೆ ಶಿವಬಸವ, ಶಿವಸಿದ್ಧರಾಮ ಇಬ್ಬರೂ ‘ಇನ್ನೊಂದ ಶುಭ ಕಾರ್ಯವಿದೆ. ಮುಗಿಸಿಕೊಂಡು ಹೋಗ್ರಿ’ ಎಂದು ಹೇಳುತ್ತಲೇ ಇದ್ದರು. ಆ ಕಾರ್ಯ ಯಾವುದೆಂದು ದೊಡ್ಡ ಮನೆಯ ಆಪ್ತರಿಗೆ ಗೊತ್ತಿತ್ತು. ಉಳಿದವರಿಗೆ ಸುಳಿವು ಸಿಕ್ಕರೂ ಅನುಮಾನಗಳಲ್ಲೇ ಇದ್ದರು...

‘ತಾತ, ಅಪ್ಪ, ಬೀಗ್ರು ಇನ್ನೂ ಬರುವ ಲಕ್ಷಣ ಕಾಣದಿಲ್ಲ. ನಾನು, ತಮ್ಮ, ಊರ ನಾಕಾರು ಮಂದಿ ಬಂಡಿ ಕಟ್ಟಕೊಂಡು ಹೋಗಿ ವಿಚಾರಿಸಿ ಬರಮೇನು?’ ಶಿವಬಸವ ಕೊಠಡಿಗೆ ಬಂದು ಕೇಳಿದ.

ಇಬ್ಬರೂ ಜಲ್ದಿ ಮಾತಾಡಲಿಲ್ಲ.

‘ಶಿವ, ಹೊತ್ತೇರಿ ಐದು ತಾಸಾಗಿರ್ಬೇಕು. ನಮ್ಮ ಸಂಜೇತನಕ ಬಂದ್ರೂ ನಡಿತದ. ಮಲ್ಲಿಕಾರ್ಜುನಪ್ಪಗ ಮತ್ತೇನು ತೊಡಕು ಬಂತೋ ಏನೋ! ಆದ್ರು ಬೀಗ್ರು ಬರ್ತಾರಂತ ಮನ್ಸು ಹೇಳ್ತದ ಕಾಯಣು’ ಎಂದು ತಾತ ಆತಂಕವಿಲ್ಲದ ದನಿಯಲ್ಲಿ ಹೇಳಿದ.

‘ಆಗ್ಲಿ ತಾತ, ಹೊತ್ತು ಹೊಳ್ಳಿ ಉಂಬ ಹೊತ್ತಾಯ್ತು ಅಂದ್ರ ಊರುಕೇರಿ ಮಂದಿಗೆ ಊಟಕ್ಕ ಕರದು ಬುಡ್ತೀವಿ. ಮನೆಮಂದಿನೂ ಸೇರಿಕೊಳ್ತಾರ...’ ಎಂದು ಹೇಳಿ ಹೋದ.

ತಾತನಿಗೆ ಸಮಾಧಾನವಾಯ್ತು. ಶಿವಸಂಗಪ್ಪನ ಹಿರಿಯ ಮಕ್ಕಳಿಬ್ಬರು ಶುರುವಿಗೆ ಬಿರುಸಾಗಿಯೇ ವಾದ ಮಾಡಿದ್ರು. ಶಿವಸಂಗಪ್ಪ ಯಜಮಾನನ ಮಾತೂ ಮೀರುತ್ತಾರೇನೋ ಎಂಬ ಭಯ ಬಂದಿತ್ತು. ತಾತ ಹಿಂಜರಿದವನ ಮಾತುಕತೆ ಆಡುತ್ತ ಒಪ್ಪುವಂತೆ ಮಾಡಿದ್ದ. ಅಂದು ಶಿವಸಂಗಪ್ಪನಿಗೆ ಮುರಿದ ಮುಳ್ಳು ತೆಗೆದಾಗ ಹಗುರಾಗುವಷ್ಟು ಉಮೇದಿಗೊಂಡಿದ್ದ. ಈಗಂತೂ ಅವರಿಬ್ಬರ ಉತ್ಸಾಹ ಎಲ್ಲರನ್ನೂ ಮೀರಿಸಿತ್ತು. ಶಿವಮಲ್ಲಯ್ಯ ತಾತ ಎದ್ದು ‘ಹೊರಗ ಹೋಗಿ ಬರ್ತೀನಿ. ನೀನಿರು’ ಎಂದು ಕೊಠಡಿಯಿಂದ ಹೊರಬಂದು, ಯಾರನ್ನೂ ಗಮನಿಸದೆ ಹಿತ್ತಲಿಗೆ ಬಂದು, ಅಲ್ಲಿದ್ದ ಕಲ್ಲಿನ ಪಾಂಟಣಗಿ ಏರತೊಡಗಿದ. ಅದು ಮಾಳಿಗೆಗೆ ಹೋಗುತ್ತಿತ್ತು. ತಟಗು ಆಯಾಸವಾಯಿತು. ಉರಿ ಬಿಸಿಲು ರಣರಣ ಅನ್ನುವಂಗಿತ್ತು. ದೊಡ್ಡಮನೆ ಮಾಳಿಗೆ ಏರಿ, ಮನೆ ಮೇಲೆ ನಿಂತು ನದಿ ದಿಕ್ಕಿಗೆ ನೋಡಿದ. ಸುತ್ತಲು ನಾಲ್ಕು ದಿಕ್ಕುಗಳಲ್ಲಿ ಭೂಮಿ ಬಣಬಣ ಮಲಗಿತ್ತು. ಶಿವರಾತ್ರಿಗೆಲ್ಲ ಎಲ್ಲ ಬೆಳೆಗಳ ಕಣಗಳು ಮುಗಿದಿದ್ದವು. ಬ್ಯಾಸಿಗೆಯ ಕೊನೆ ದಿನಗಳು. ಕಣ್ಣು ತೆರೆದು ನೋಡಲು ಬಿಸಿಲು ಅಡ್ಡಿ ಮಾಡಿತ್ತು. ಆದರೂ ಈ ಮಾಳಿಗೆ ಮ್ಯಾಲಿಂದ ನೋಡಿದರೆ ನದಿ ಕಾಣುತ್ತಿತ್ತು. ನೀರಿಲ್ಲದ ಬರಿ ಒಡಲು ಕಾಣುತ್ತಿತ್ತು. ನದಿಯಿಂದ ಬಂಡಿದಾರಿ ಸೀದ ದೊಡ್ಡಮನೆಗೆ ಗೆರೆ ಕೊರದಂಗ ಕಂಡಿತು. ನದಿಯಾಚೆ ಬಸವಪುರ, ದೌಡ ನಡೆದರೆ ಒಂದು ತಾಸಿನ ದಾರಿ. ಇಂದು ತಾತನಿಗೆ ಆ ದಾರಿಯಲ್ಲಿ ನರಮನುಷ್ಯನೂ ಕಾಣಲಿಲ್ಲ. ಇದು ಸುಗ್ಗಿಯ ಕಾಲವಲ್ಲ. ಮೇಲಾಗಿ ಮಧ್ಯಾಹ್ನದ ರಣರಣ ಬಿಸಿಲು! ನಿಂತು ನೋಡುತ್ತಿದ್ದ ತಾತನ ಕಣ್ಣಿಗೆ ಬಿಸಿಲ್ಗುದುರೆಗಳು ಜುಳುಜುಳು ಅಂತ ನಿಶ್ಯಬ್ದವಾಗಿ ಕಣಿಯುತ್ತಿದ್ದವು. ಬಿಸಿಲಿನ ಝಳಕ್ಕೆ ಕಣ್ಣುಗಳೇ ಮುಚ್ಚಿದವು. ಅಲ್ಲಿಂದ ಬೆವರುತ್ತ ಮೆಲ್ಲಗೆ ಇಳಿಯುತ್ತ ಹಿತ್ತಲಿಗೆ ಬಂದ ತಾತ ಸೀದ



